

ಚಿತ್ರ: ಶಶಿಧರ್ ಹಳೇಮನಿ

# ಯಶಸ್ಸಿನ ಗುಟ್ಟು

■ ಟಿ.ಆರ್. ಉಷಾರಾಣಿ

ಒಂದೂರಿನಲ್ಲಿ ಒಬ್ಬ ರೈತನಿದ್ದ. ಅವನ ಹೆಸರು ರಾಮಪ್ಪ. ಅವನ ಆಸ್ತಿ ಎಂದರೆ ಎರಡೆಕರೆ ಜಮೀನು. ಅದು ಅವನ ಪೂರ್ವಜರಿಂದ ಬಂದದ್ದು. ಅದನ್ನೇ ತನ್ನ ದೇವರೆಂದು ನಂಬಿ ರೈತ ದಿನ ನಿತ್ಯ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದ. ಪ್ರತೀ ವರ್ಷವೂ ಅವನ ಪರಿಶ್ರಮಕ್ಕೆ ತಕ್ಕ ಫಲ ಸಿಗುತ್ತದೆ ಎನ್ನುವಂತಿರಲಿಲ್ಲ. ಒಮ್ಮೆ ಉತ್ತಮ ಫಲ ಮತ್ತೊಮ್ಮೆ ಮಧ್ಯಮ ಕೆಲವೊಮ್ಮೆ ಬೆಳೆ ಎಲ್ಲಾ ನಾಶವಾಗಿ ಬರಿಗೈ. ಆದರೂ ರೈತ ಎಂದೂ ಧೃತಿಗೆಡಲಿಲ್ಲ. ಬಂದುದರಲ್ಲಿ ಸಂತೃಪ್ತ ಜೀವನವನ್ನು ನಡೆಸಿಕೊಂಡಿದ್ದ. ಬಿಡುವಿನ ವೇಳೆಯಲ್ಲಿ ಬುಟ್ಟಿಗಳನ್ನು ಹೆಣೆಯುವ ಕೆಲಸವನ್ನೂ ಮಾಡುತ್ತಿದ್ದ. ಅದು ಹವ್ಯಾಸವೆಂದು ಪ್ರಾರಂಭವಾಗಿ ಕಾಲಕ್ರಮೇಣ ಅದರಿಂದ ಒಳ್ಳೆಯ ಲಾಭ ಬರಲು ಶುರುವಾಯಿತು. ಅವನ ಹೆಂಡತಿಯೂ ಸಹಾಯವನ್ನು ಮಾಡುತ್ತಿದ್ದಳು. ಸಂತೆಯಲ್ಲಿ ಹೆಚ್ಚು ಹೆಚ್ಚು ಮಾರಾಟವಾಗಿ ಒಳ್ಳೆಯ ಲಾಭವೂ ಬರುತ್ತಿತ್ತು. ಸುತ್ತ ಮುತ್ತಲ ಹಳ್ಳಿಗಳಲ್ಲಿ ಅವನಷ್ಟು ಚೆನ್ನಾಗಿ ಬುಟ್ಟಿ ಹೆಣೆಯುವವರು ಯಾರೂ ಇರಲಿಲ್ಲ.

ರಾಮಪ್ಪನಿಗೆ ಇಬ್ಬರು ಗಂಡು ಮಕ್ಕಳಿದ್ದರು. ರವಿ ಮತ್ತು ಶಶಿ. ದೊಡ್ಡವನು ಮಹತ್ವಾಕಾಂಕ್ಷಿ. ಏನೇ ಕೆಲಸ ಮಾಡಿದರೂ ಉತ್ತಮವಾದುದನ್ನೇ ಬಯಸುತ್ತಿದ್ದ. ಶಾಲೆಯಲ್ಲೂ ಸದಾ ಮೊದಲಿಗನಾಗಿದ್ದ. ಆಟ, ಪಾಠ ಎಲ್ಲದರಲ್ಲೂ ಮೇಲುಗೈ. ಚಿಕ್ಕವನು ಮತ್ತೊಂದು ರೀತಿ, ಅವನಿಗೆ ಏನು ಬೇಕೋ ಅದನ್ನೇ ಮಾಡುತ್ತಿದ್ದ. ಸಿಕ್ಕಿದ್ದಕ್ಕೆ ಅತಿಯಾಗಿ ಸಂತೋಷ ಪಡುವುದಾಗಲಿ ಸಿಗದೇ ಇರುವುದಕ್ಕೆ ದುಃಖಿಸುವುದಾಗಲಿ ಇಲ್ಲ. ಯಾವ ವಿಷಯಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರಲಿಲ್ಲ. ಒಂದೇ ಬಳ್ಳಿಯ ಹೂವುಗಳೇ ಆದರೂ ವಿಭಿನ್ನವಾಗಿರುವಂತೆ ಇವರೀರ್ವರ ನಡೆ ನುಡಿಗಳೂ ವಿಭಿನ್ನವಾಗಿದ್ದವು. ರಾಮಪ್ಪನಿಗೆ ಇಬ್ಬರ ಬಗ್ಗೆಯೂ ತುಂಬ ಚಿಂತೆಯಾಗುತ್ತಿತ್ತು. ದೊಡ್ಡವನು ಕೇವಲ ಯಶಸ್ಸನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದನು. ಚಿಕ್ಕವನು ನಿರ್ಲಿಪ್ತನಾಗಿರುತ್ತಿದ್ದನು. ಮಕ್ಕಳಿಗೆ ಒಂದು ಸಣ್ಣ ಪರೀಕ್ಷೆಯನ್ನು ನೀಡಬೇಕೆಂದು ನಿರ್ಧರಿಸಿದ ರೈತನು ಮಕ್ಕಳನ್ನು ಹತ್ತಿರ ಕರೆದು 'ನೋಡಿ ಮಕ್ಕಳೇ ನಿಮಗೆ